**ದಿಃ09.08.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.**
**ಮುಂದುವರೆದ ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ**

13. ಈ ದಾವೆಯಲ್ಲಿ ನನ್ನ ತಂದೆಯಾದ 2ನೇ ಪ್ರತಿವಾದಿ ನ್ಯಾಯಾಲಯಕ್ಕೆ ಹಾಜರಾಗಿ ತಮ್ಮ ಲಿಖಿತ ಹೇಳಿಕೆಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿ. 2ನೇ ಪ್ರತಿವಾದಿ ನ್ಯಾಯಾಲಯಕ್ಕೆ ಸಲ್ಲಿಸಿರುವಂತಹ ಲಿಖಿತ ಹೇಳಿಕೆಯಲ್ಲಿ ತಿಳಿಸಿರುವ ವಿಷಯವನ್ನು ನಾನು ತಿಳಿದುಕೊಂಡಿರುತ್ತೇನೆ. ನಾನು ಹೇಳುವಂತಹ ವಿಭಾಗ ಪತ್ರದ ಮಹಜರ್ ನನ್ನ ಬಳಿ ಇದೆ. ಸದರಿ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಬಹುದು. ಸದರಿ ವಿಭಾಗ ಪತ್ರದ ಮಹಜರ್ ಪ್ರಕಾರ ವಾದಿಯವರ ತಂದೆಗೆ ಯಾವುದೆಲ್ಲಾ ಸರ್ವೆ ನಂಬರ್ ಆಸ್ತಿಯನ್ನು ಕೊಟ್ಟಿರುತ್ತಾರೆ ಎಂದು ಹೇಳಬಹುದು. ವಾದಿಯವರ ತಂದೆಗೆ ಕಾಲೂರು ಗ್ರಾಮದಲ್ಲಿ ಯಾವುದೆಲ್ಲಾ ಸರ್ವೆ ನಂಬರ್ ಆಸ್ತಿ ಮತ್ತು ಅದರ ವಿಸ್ತೀರ್ಣ ಕೊಟ್ಟಿರುತ್ತಾರೆ ಎಂದು ಹೇಳಲು ನನಗೆ ಗೊತ್ತಿಲ್ಲ. ನಾನು ಹೇಳುವಂತೆ ಯಾವುದೇ ವಿಭಾಗ ಪತ್ರ ಮಹಜರ್ ಆಗಿರುವುದಿಲ್ಲ ಆದ ಕಾರಣ ಸದರಿ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸುಳ್ಳು.

14. ಸಾಕ್ಷಿಗೆ ದಿಃ 24.07.2019 ರಂದು 5ನೇ ಪ್ರತಿವಾದಿ, 3(ಎ), 3(ಬಿ), 19, 20, 21 ನೇ ಪ್ರತಿವಾದಿಯವರು 22 ರಿಂದ 24ನೇ ಪ್ರತಿವಾದಿಯವರಿಗೆ ಮಾಡಿಕೊಟ್ಟಿರುವಂತಹ ನೋಂದಾಯಿತ ಕ್ರಯಪತ್ರದ ದೃಢೀಕೃತ ನಕಲು ಮತ್ತು ಸಂಬಂಧಪಟ್ಟ ಎಲ್ಲಾ ದಾಖಲೆಗಳನ್ನು ತೋರಿಸಿದ್ದು ಅದನ್ನು ನೋಡಿ ಸಾಕ್ಷಿ ಒಪ್ಪಿದ ಮೇರೆಗೆ ನಿಪಿ-35 ಎಂದು ಗುರುತಿಸಲಾಯಿತು. ನಿಪಿ-35 ಕ್ರಯಪತ್ರದಲ್ಲಿ ತಿಳಿಸಿರುವ ಶೆಡ್ಯೂಲ್ ಆಸ್ತಿಗಳು ಕರಕರನ ತಿಮ್ಮಯ್ಯರವರಿಗೆ ಸೇರಿದ ಆಸ್ತಿಯಾಗಿತ್ತು ಎಂದರೆ ಸರಿ. ನಿಪಿ-35 ಕ್ರಯಪತ್ರದಲ್ಲಿ ತಿಳಿಸಿರುವಂತಹ 1972ರಲ್ಲಿ ಯಾವುದೇ ರೀತಿಯಾದಂತಹ ವಿಭಾಗ ಪತ್ರ ಕೆ.ಟಿ.ಮೊಣ್ಣಪ್ಪ ಮತ್ತು ಇತರರ ನಡುವೆ ಆಗಿರುವುದಿಲ್ಲ ಎಂದರೆ ಸುಳ್ಳು. ನಿಪಿ-35 ಕ್ರಯಪತ್ರದಲ್ಲಿ ತಿಳಿಸಿರುವಂತಹ 1972ರ ವಿಭಾಗ ಪತ್ರದ ಪ್ರತಿ ನನ್ನ ಬಳಿ

ಇದೆ. ಸದರಿ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಬಹುದು.

15. ಸಾಕ್ಷಿಗೆ ದಿಃ 17.04.2021 ರಂದು 18 ನೇ ಪ್ರತಿವಾದಿಯವರು ಮಹಮದ್ ಇಕ್ಬಾಲ್ ಎಂಬುವವರಿಗೆ ಮಾಡಿರುವಂತಹ ನೋಂದಾಯಿತ ಕ್ರಯಪತ್ರದ ದೃಢೀಕೃತ ನಕಲನ್ನು ತೋರಿಸಿದ್ದು ಅದನ್ನು ನೋಡಿ ಒಪ್ಪಿದ ಮೇರೆಗೆ ನಿಪಿ-36 ಎಂದು ಗುರುತಿಸಲಾಯಿತು. ನಿಪಿ-36 ಕ್ರಯಪತ್ರದಲ್ಲಿ 18 ನೇ ಪ್ರತಿವಾದಿಯ ಹೆಸರಿನ ನಂತರದಲ್ಲಿ ತಿಳಿಸಿರುವಂತಹ ಪುಷ್ಪಾವತಿ, ಲಿಖಿತ ಮತ್ತು ಆದರ್ಶ್ ಎಂಬುವವರು ಸದರಿಯವರ ಹೆಂಡತಿ ಮತ್ತು ಮಕ್ಕಳು ಎಂದರೆ ಸರಿ. ನಿಪಿ-36 ಕ್ರಯಪತ್ರದಲ್ಲಿ ತಿಳಿಸಿರುವಂತಹ ಆಸ್ತಿ ಕೂಡಾ ಕರಕರನ ತಿಮ್ಮಯ್ಯರವರಿಗೆ ಸೇರಿದ ಆಸ್ತಿಯಾಗಿತ್ತು ಎಂದರೆ ಸರಿ. ವಾದಿಯವರಿಗೆ ಕುಟುಂಬದ ಆಸ್ತಿಯಲ್ಲಿ ಯಾವುದೇ ಪಾಲು ಹೋಗಬಾರದು ಎಂಬ ಉದ್ದೇಶದಿಂದ ನಾವುಗಳು ಎಲ್ಲಾ ಸೇರಿ ನಿಪಿ-35 ಮತ್ತು 36 ಕ್ರಯಪತ್ರಗಳನ್ನು ಮಾಡಿರುತ್ತೇವೆ ಎಂದರೆ ಸುಳ್ಳು. ಕರಕರನ ತಿಮ್ಮಯ್ಯರವರ ಎಲ್ಲಾ ವಾರೀಸುದಾರರಿಗೂ ಸದರಿಯವರ ಆಸ್ತಿಗೆ ಸಂಬಂಧಿಸಿದಂತೆ ಹಕ್ಕು ಇದೆ ಎಂದರೆ ಸುಳ್ಳು. ನಾನು ಹೇಳುವ ಹಾಗೆ ಕರರಕನ ತಿಮ್ಮಯ್ಯರವರ ಆಸ್ತಿಗೆ ಸಂಬಂಧಿಸಿದಂತೆ ಯಾವುದೇ ವಿಭಾಗ ಆಗಿರುವುದಿಲ್ಲ ಎಂದರೆ ಸುಳ್ಳು. ನಾನು ಹೇಳಿದ ಹಾಗೆ 1971 ಅಥವಾ 1972 ರಲ್ಲಿ ಯಾವುದೇ ವಿಭಾಗ ಆಗಿರುವುದಿಲ್ಲ ಎಂದರೆ ಸುಳ್ಳು. ವಾದಿಯವರಿಗೆ ಕುಟುಂಬದ ಆಸ್ತಿಯಲ್ಲಿ ಪಾಲು ಸಿಗಬಾರದು ಎಂಬ ಉದ್ದೇಶದಿಂದ ನಾನು ಸುಳ್ಳು ಪ್ರತಿಪಾದನೆ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿ.ಇದೆ.

ಸಹಿ/-

(ಎನ್. ಬಿ. ಜಯಲಕ್ಷ್ಮಿ)

ಹಿರಿಯ ಸಿವಿಲ್ ನ್ಯಾಯಾಧೀಶರು,
ಕೊಡಗು, ಮಡಿಕೇರಿ.